# ‘ಶ್ರೀರಾಮಕೃಷ್ಣ ವಚನವೇದ’ – ಕಲಿಯುಗದ ವೇದ

ಸ್ವಾಮಿ ವಿನಯಾನಂದ



ದಕ್ಷಿಣೇಶ್ವರದಲ್ಲಿರುವ ಶ್ರೀರಾಮಕೃಷ್ಣರ ಕೊಠಡಿ

**ಆ**ತ್ಮೀಯರೆ, ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಶ್ರೀರಾಮಕೃಷ್ಣ–ವಿವೇಕಾನಂದರ ಸಂಪರ್ಕಕ್ಕೆ ನನ್ನ ಸ್ನೇಹಿತನ ಮೂಲಕ ಬರುವಂತಾಯಿತು. ಆಗ ಸ್ವಾಮಿ ವಿವೇಕಾನಂದರ ಶಕ್ತಿಶಾಲಿ ಚಿಂತನೆಗಳನ್ನು ಓದಿ ಭಾರತಮಾತೆಯ ಸೇವೆಗಾಗಿ, ಜೀವನದ ಪರಮ ಉದ್ದೇಶವಾದ **‘ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ’** – ಜಗತ್ತಿನ ಜನರ ಸೇವೆ ಮಾಡುತ್ತಾ ತನ್ನ ಆತ್ಮವನ್ನು ಉದ್ಧರಿಸಿಕೊಳ್ಳುವುದರ ಕಡೆಗೆ ನನ್ನ ಮನಸ್ಸು ಆಕರ್ಷಿತವಾಯಿತು ಮತ್ತು ಆ ಚಿಂತನೆಯಲ್ಲೇ ಅದು ತನ್ಮಯವಾಯಿತು. ಈ ಜಗತ್ತಿನಲ್ಲಿ ಸೃಷ್ಟಿಯಾದ ಪ್ರತಿಯೊಂದು ವಸ್ತುವಿಗೂ, ಪ್ರತಿಯೊಂದು ಜೀವಿಗೂ ಹಾಗೂ ಪ್ರತಿಯೊಂದು ಘಟನೆಗೂ ಏನೋ ಒಂದು ದಿವ್ಯ ಅರ್ಥ ಇರಲೇಬೇಕು, ಹಾಗಾದರೆ ಅದು ಏನು ಎಂದು ತಿಳಿಯುವುದರ ಕಡೆಗೆ ನಾನು ಗಮನ ಹರಿಸಿದೆ. ರಾಮಕೃಷ್ಣ ಆಶ್ರಮದಿಂದ ಪ್ರಕಟವಾದ ಅನೇಕ ಪುಸ್ತಕಗಳನ್ನು ಓದುತ್ತಾ ಬಂದಾಗ ನನ್ನ ಅನೇಕ ಪ್ರಶ್ನೆಗಳಿಗೆ ಉತ್ತರಗಳು ದೊರೆಯುತ್ತಾ ಬಂದವು. ಹೀಗೆ ನನ್ನ ಅಧ್ಯಯನ ಮುಂದುವರಿದಂತೆಲ್ಲಾ ತಿಳಿಯಿತು, ಮನುಷ್ಯನ ಎಲ್ಲ ಸಮಸ್ಯೆಗಳು ಹುಟ್ಟುವುದು ಅಹಂಕಾರ ಮತ್ತು ಕಾಮನೆಗಳಿಂದ ಎಂದು. ಎಲ್ಲ ಸಮಸ್ಯೆಗಳ ತಾಯಿ ಬೇರು ಎನಿಸಿಕೊಂಡ ಈ ಅಹಂಕಾರ ಮತ್ತು ಕಾಮನೆಗಳನ್ನು ಗೆಲ್ಲುವುದು ಹೇಗೆ ಎಂಬ ಜಿಜ್ಞಾಸೆ ನನ್ನ ಮನಸ್ಸಿನಲ್ಲಿ ತೀವ್ರವಾಗಿ ನಡೆಯುತ್ತಿತ್ತು. ಆಗ ನನ್ನ ಆತ್ಮೀಯ ಸ್ನೇಹಿತ (ಈಗ ಅವನು ಸಂನ್ಯಾಸಿಯಾಗಿದ್ದಾನೆ) ನನಗೆ ಒಂದು ಸಲಹೆ ಕೊಟ್ಟ: “ನೋಡು, ಆಶ್ರಮದಲ್ಲಿ ಒಂದು ಪುಸ್ತಕ ಇದೆ. ಅದೊಂದು ವಿಶೇಷವಾದ ಪುಸ್ತಕ. “ಭಗವಂತನನ್ನು ನೋಡುವುದು ಹೇಗೆ, ಮಾತನಾಡುವುದು ಹೇಗೆ?, ಪ್ರೀತಿಸುವುದು ಹೇಗೆ? ಹಾಗೂ ಅಹಂಕಾರ ಮತ್ತು ಕಾಮ–ಕಾಂಚನಗಳನ್ನು ಗೆಲ್ಲುವುದು ಹೇಗೆ?” –ಈ ತೆರನಾದ ವಿಚಾರಗಳೇ ಅದರಲ್ಲಿ ತುಂಬಿವೆ. ಆದ್ದರಿಂದ ಮೊದಲು ಅದನ್ನು ತರಿಸಿಕೊಂಡು ಓದು. ನಿನಗೆ ಒಳ್ಳೆಯದಾಗುತ್ತದೆ” ಎಂದು ತಿಳಿಸಿದ. ಅವನು ತಿಳಿಸಿದ ಆ ಪಾವನ ಗ್ರಂಥವೇ **‘ಶ್ರೀರಾಮಕೃಷ್ಣ ವಚನವೇದ.’** ಇದರ ಕುರಿತಾಗಿ ಸ್ವಲ್ಪ ಚಿಂತನ ಮಂಥನ ಮಾಡೋಣ.

“ಶ್ರೀರಾಮಕೃಷ್ಣ ವಚನವೇದವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ, ಆದರೆ ದೇವಸ್ಥಾನ, ಪುಣ್ಯಕ್ಷೇತ್ರಗಳಂತೆ ಅದೆಂದಿಗೂ ಕಲುಷಿತವಾಗುವ ಸಂಭವವಿಲ್ಲ, ಶಿಥಿಲವಾಗುವ ಸಂಭವವಿಲ್ಲ. ಯಾವ ಮನೆಯಲ್ಲಿ ಈ ವಚನವೇದ ಇರುತ್ತದೆಯೊ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿದಿರುತ್ತದೆಯೋ ಅದು ಭಗವಂತನ ಪಾದಾರವಿಂದವನ್ನೇ ಧರಿಸಿರುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೋ, ಅದು ಅಮೃತವನ್ನೇ ಉಂಟುತ್ತಿರುತ್ತದೆ. ಇದು ಆನಂದದ ಆಗರ, ಶಾಂತಿಯ ಸಾಗರ, ದಿವ್ಯಜ್ಞಾನದ ಓಗರ. ಕಷ್ಟದ ಸಮಯದಲ್ಲಿ ಧೈರ್ಯವೀಯುವ ಸಖ; ಸುಖದ ಸಮಯದಲ್ಲಿ ಸಮರ್ಪಣಾಭಾವವಿತ್ತು ವಿನಯ ಭಕ್ತಿಗಳನ್ನು ಪ್ರಚೋದಿಸುವ ಗುರು; ಕತ್ತಲಲ್ಲಿ ದೀಪ; ದಾರಿಗೆ ಊರುಗೋಲು, ದಿಕ್ಕುಗೆಡದಂತೆ ಗುರಿತೋರುವ ಧ್ರುವತಾರೆ. ಇಲ್ಲಿ ವೇದ–ವೇದಾಂತ ದರ್ಶನಾದಿಗಳ ಸಾರವಿದೆ. ಓದು ಬರುವ ಅತ್ಯಂತ ಸಾಮಾನ್ಯನೂ ಇದನ್ನು ಓದಿದ ಮೇಲೆ ಯಾವ ಪಂಡಿತನಿಗೂ ಕಡಿಮೆ ಎಂದು ಕರುಬುವ ಆವಶ್ಯಕತೆ ಇಲ್ಲ; ಯಾವ ವಿದ್ವತ್ಪೂರ್ಣವಾದ ತತ್ತ್ವಜ್ಞಾನಿಗೂ ಕೀಳೆಂದು ನಾಚಬೇಕಿಲ್ಲ. ಅದಕ್ಕೆ ಬದಲು ಭಗವಂತನ ಕೃಪೆಯಿಂದ

ಶ್ರೀರಾಮಕೃಷ್ಣ ಭಕ್ತವೃಂದಕ್ಕೆ ಮಾತ್ರವಲ್ಲ, ಜಗತ್ತಿನ ಎಲ್ಲ ಸಜ್ಜನರಿಗೂ ರಾಮಕೃಷ್ಣ ವಚನವೇದವು ಜ್ಞಾನದ ಗಣಿ, ಭಕ್ತಿಯ ಸಾಗರ, ಕರ್ಮ ಮೀಮಾಂಸೆ ಮತ್ತು ಧ್ಯಾನದ ಕೈಪಿಡಿ. ಈ ಲೋಕೋತ್ತರ ಕೃತಿಯ ಪರಿಚಯವನ್ನು ಸರಳವಾಗಿ ಮಾಡಿಕೊಟ್ಟಿರುವ ಪೂಜ್ಯ ಸ್ವಾಮೀಜಿಯವರು ಶಿವಮೊಗ್ಗೆಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಮುಖ್ಯಸ್ಥರು; ಉತ್ತಮ ವಾಗ್ಮಿಗಳು.

ತನಗಿಂತಲೂ ಧನ್ಯರಿಲ್ಲ ಎಂದರಿತು ನಿರ್ಮಮನಾಗುತ್ತಾನೆ, ಶಾಂತನಾಗುತ್ತಾನೆ, ಪೂರ್ಣನಾಗುತ್ತಾನೆ"– ಇವು ರಾಷ್ಟ್ರಕವಿ ಕುವೆಂಪುರವರು ಈ ಗ್ರಂಥದ ಕುರಿತು ಆಡಿದ ಅವರ ಹೃದಯಾಂತರಾಳದ ಮಾತುಗಳು. ಈ ಮಾತುಗಳನ್ನು ಓದಿದಾಗ ನಮಗೆ ಕುವೆಂಪುರಂತಹ ನಿಷ್ಠುರ, ನಿಷ್ಪಕ್ಷಪಾತ, ಸತ್ಯಪ್ರಿಯ ಹಾಗೂ ಸತ್ಯಾನ್ವೇಷಕರಾದ ಕವಿಗಳನ್ನೇ ಈ ಗ್ರಂಥ ಪ್ರಭಾವಕ್ಕೊಳ ಪಡಿಸಿರಬೇಕಾದರೆ, ಅದು ಎಷ್ಟೊಂದು ಶ್ರೇಷ್ಠಮಟ್ಟದ್ದಾಗಿರ ಬಹುದು ಎಂದು ತಿಳಿಯುತ್ತದೆ. ಶ್ರೀರಾಮಕೃಷ್ಣ ವಚನವೇದವು ಎಂತಹ ಅದ್ಭುತ ಗ್ರಂಥವೆಂದರೆ ಜಗತ್ತಿನ ಎಲ್ಲ ಬಗೆಯ ಜನರೂ ಇದರಲ್ಲಿ ತಮ್ಮ ಆದರ್ಶವನ್ನು ಕಂಡುಕೊಂಡು, ಮಾರ್ಗದರ್ಶನ ಪಡೆದು ತಮ್ಮ ಜೀವನವನ್ನು ಸದ್ಯ ಇರುವ ಸ್ಥಿತಿಯಿಂದಲೇ ದಿವ್ಯ ಔನ್ನತ್ಯದ ಸ್ಥಿತಿಗೆ ಏರಿಸಿಕೊಂಡು, ಕೃತಕೃತ್ಯರಾಗಿ ಧನ್ಯತೆಯನ್ನು ಪಡೆಯಬಹುದು.

ಇದನ್ನು ರಚಿಸಿದವರು ಮಹೇಂದ್ರನಾಥ ಗುಪ್ತ ಎಂಬುವವರು. ಅವರು 'ಮ' ಎಂಬ ಗುಪ್ತನಾಮದಲ್ಲಿ ಇದನ್ನು ಬರೆದಿದ್ದಾರೆ. ಸಂಸಾರದ ಕಷ್ಟಕೋಟಲೆಗಳಿಂದ ರೋಸಿಹೋದ 'ಮ' ಅಥವಾ ಮಾಸ್ಟರ್ ಮಹಾಶಯ, ಶ್ರೀರಾಮಕೃಷ್ಣರಲ್ಲಿ ಸಾಂತ್ವನದ ಸುಧೆಯನ್ನೂ, ಅರಿವಿನ ಆಶ್ರಯವನ್ನೂ ಕಾಣುತ್ತಾರೆ. ವೃತ್ತಿಯಲ್ಲಿ ಉಪಾಧ್ಯಾಯರಾದ ಅವರು ರಜೆಯ ದಿನಗಳಂದು, ಪರಮಹಂಸರ ದರ್ಶನಕ್ಕೆ ಹೋಗುತ್ತಿದ್ದರು. ಅವರ ಅಮೃತವಾಣಿಗಳನ್ನು ಕೇಳಿ ಮುಗ್ಧರಾಗಿ, ತಮ್ಮ ಸ್ವಂತ ಪ್ರಯೋಜನಕ್ಕಾಗಿ ಅವುಗಳನ್ನು ಬರೆದಿಟ್ಟುಕೊಳ್ಳಲು ಆರಂಭಿಸಿದರು. ಶ್ರೀರಾಮಕೃಷ್ಣರ ನಿರ್ಯಾಣಾನಂತರ, ಅವುಗಳ ಮೇಲೆ ಆಳವಾಗಿ ಆಲೋಚಿಸಿ, ಧ್ಯಾನ ಮಾಡಿ, ಅವುಗಳನ್ನು ಪ್ರಕಟಣೆಗೆ ಸಿದ್ಧಮಾಡಿದರು. ಹಲವು ಸಂಪುಟಗಳಲ್ಲಿ ಹೊರಬಂದ ಮೂಲ ಬಂಗಾಳಿ ಗ್ರಂಥವು ಸಂಪೂರ್ಣವಾದ ಮೇಲಷ್ಟೇ ಅವರು ತಮ್ಮ ದೇಹವನ್ನು ಬಿಟ್ಟದ್ದು. ಈ ಕೃತಿಯನ್ನು ಕುರಿತು ಕುವೆಂಪು ಹೀಗೆ ಹೇಳುತ್ತಾರೆ: " 'ಮ' ಅವರ ಮೇರುಕೃತಿ ಮನುಷ್ಯತ್ವವಿರುವವರೆಗೆ, ಅದು ದೇವತ್ವವನ್ನು ಬಯಸುತ್ತಿರುವವರೆಗೆ, ಜೀವಂತಶಕ್ತಿಯಾಗಿರುತ್ತದೆ. ಕಟ್ಟಡ ಸಂಸ್ಥೆಗಳು ಕಾಲವಶವಾಗಿ ಗತಿಸಬಹುದು; ಸರಸ್ವತಿ ಅಮರ."

ಶ್ರೀರಾಮಕೃಷ್ಣರ ಬಳಿಗೆ ಬಗೆಬಗೆಯ ವರ್ಗದ ಜನರು ಬಂದು ಪ್ರಶ್ನೆಗಳನ್ನು ಹಾಕಿ ಅವರಿಗೆ ತೃಪ್ತಿಯಾಗುವಂತಹ ಸರಳ ದಿವ್ಯ ಉತ್ತರಗಳನ್ನು ಪಡೆದು, ಶ್ರೀರಾಮಕೃಷ್ಣರ ನಿಷ್ಕಲ್ಮಷ ಪ್ರೀತಿಯನ್ನು ಮನಸ್ಸಿನಲ್ಲಿ ತುಂಬಿಕೊಂಡು, ಹೃದಯದಲ್ಲಿ ಆನಂದವನ್ನು ಅನುಭವಿಸುತ್ತಾ ಹಿಂದಿರುಗುತ್ತಿದ್ದರು. ಬಗೆಬಗೆಯ ಜನರಿಗೆ ಬಗೆಬಗೆಯ ಉಪದೇಶಗಳನ್ನು ಶ್ರೀರಾಮಕೃಷ್ಣರು ಸರಳ ಸುಂದರ ದೃಷ್ಟಾಂತಗಳ ಮೂಲಕ ನೀಡುತ್ತಿದ್ದರು. ಇವೆಲ್ಲವನ್ನೂ ಶ್ರೀರಾಮಕೃಷ್ಣ ವಚನವೇದವನ್ನು ಓದುತ್ತಾ ಹೋದಂತೆ ನಾವು ಗಮನಿಸಬಹುದು. ಯುವತ್ಯಾಗಿಗಳಿಗೂ ಗೃಹಸ್ಥರಿಗೂ ಇರುವ ಆ ಉಪದೇಶಗಳ ಕೆಲವು ಉದಾಹರಣೆಗಳು ಇಲ್ಲಿವೆ.

### ಯುವಕರಿಗೆ ಶ್ರೀರಾಮಕೃಷ್ಣರ ಉಪದೇಶ

ಭಗವಾನ್ ಶ್ರೀರಾಮಕೃಷ್ಣರು ಉಪದೇಶ ಮಾಡಿದ್ದು ಪ್ರಧಾನವಾಗಿ ಯುವಕರಿಗೇ ಆದರೂ, ಇದರಿಂದ ಇತರರೂ ಪ್ರಯೋಜನ ಪಡೆದರು. ಅವರ ಶಿಷ್ಯರಲ್ಲಿ, ನರೇಂದ್ರ, ರಾಖಾಲ, ಶಶಿಭೂಷಣ, ಶರತ್‌ಚಂದ್ರ, ಗಂಗಾಧರ, ಹರಿಪ್ರಸನ್ನ ಮುಂತಾದ ಯುವಕರು ಶ್ರೀರಾಮಕೃಷ್ಣರ ದಿವ್ಯವ್ಯಕ್ತಿತ್ವದಿಂದ ಹಾಗೂ ಆಧ್ಯಾತ್ಮಿಕ ಸಾಕ್ಷಾತ್ಕಾರಗಳಿಂದ ಪ್ರಭಾವಿತರಾಗಿ, ಭವಿಷ್ಯದಲ್ಲಿ ತಮ್ಮ ಇಡೀ ಜೀವನವನ್ನೇ ಮಾನವಸೇವೆಗಾಗಿ ಹಾಗೂ ಆತ್ಮಸಾಕ್ಷಾತ್ಕಾರಕ್ಕಾಗಿ ಮುಡಿಪಾಗಿಟ್ಟರು.

ವಯಸ್ಕನಾಗಿದ್ದ ಮಹೇಂದ್ರನಾಥಗುಪ್ತ ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದಾಗ ಅವರೆಂದರು, "ಎಳೆಯ ಸಸಿಯನ್ನು ಆಡು ಕುರಿಗಳು ತಿಂದು ನಾಶಪಡಿಸದಿರುವಂತೆ ಸಸಿಯ ಸುತ್ತ ಬೇಲಿ ಹಾಕುವುದು ಬಹಳ ಅವಶ್ಯಕ. ಮುಂದೆ ಸಸಿ ಮರವಾಗಿ ಬೆಳೆದ ನಂತರ ಬೇಲಿಯ ಅವಶ್ಯಕತೆ ಇರುವುದಿಲ್ಲ. ಆಗ ಆನೆ ಬಂದು ಮರದ ಬುಡವನ್ನು ಜಗ್ಗಿದರೂ ಮರಕ್ಕೆ ಅಪಾಯವಿಲ್ಲ." ಇದೇ ರೀತಿ ಸಣ್ಣವಯಸ್ಸಿನಲ್ಲಿಯೇ ಶಿಸ್ತು ಸಂಯಮದ ಬೇಲಿ ಕಟ್ಟದಿದ್ದರೆ, ಯುವಕನ ಮನಸ್ಸು ಎಂಬ ಗಿಡವನ್ನು ಹೊರಗಿನ ಆಕರ್ಷಣೆ–ಪ್ರಲೋಭನೆಗಳೆಂಬ ಆಡು–ಕುರಿಗಳು ಬಂದು ನಾಶಪಡಿಸುತ್ತವೆ.

ಯುವಕ ಶಿಷ್ಯನೊಬ್ಬನು ಶ್ರೀರಾಮಕೃಷ್ಣರನ್ನು ಕುರಿತು, "ಸ್ವಾಮಿ, ಕಾಮವನ್ನು ಹೇಗೆ ಗೆಲ್ಲುವುದು?" ಎಂದು ಪ್ರಶ್ನಿಸಿದನು. ಅದಕ್ಕೆ ಶ್ರೀರಾಮಕೃಷ್ಣರು ನಗುತ್ತ ಹೀಗೆ ಹೇಳಿದರು; "ಎಲ್ಲಾ ಸ್ತ್ರೀಯರನ್ನೂ ನಿನ್ನ ತಾಯಿಯಂತೆ ಕಾಣು. ಸ್ತ್ರೀಯರ ಮುಖವನ್ನೂ ನೋಡಬೇಡ, ಆಕೆಯ ಕಾಲುಗಳನ್ನು ನೋಡು. ಆಗ ನಿನ್ನಲ್ಲಿರುವ ಕೆಟ್ಟ ಆಲೋಚನೆಗಳೆಲ್ಲ ಪಲಾಯನ ಮಾಡುವುವು."

ಪ್ರತಿದಿನ ಮಾಡುವ ಕೆಲಸದಲ್ಲಿ ಬೇಜವಾಬ್ದಾರಿತನ, ಸೋಮಾರಿತನಗಳು ಯುವಕರಿಗೆ ಮಾರಕ. ಈ ವಿಚಾರವಾಗಿ ಶ್ರೀರಾಮಕೃಷ್ಣರು ಕುಂಬಳಕಾಯಿಯ ಮುದುಕಪ್ಪನ ದೃಷ್ಟಾಂತವನ್ನು ಕೊಡುತ್ತಾರೆ. ಗೃಹಿಣಿಯರು ಪಲ್ಯ ಮಾಡಲು ಕುಂಬಳಕಾಯಿಯನ್ನು ಉಪಯೋಗಿಸುತ್ತಾರೆ. ಈ ಕುಂಬಳಕಾಯಿಯನ್ನು ಒಡೆಯುವುದಕ್ಕಾಗಿ ಮನೆಯ ಮುಂದಿರುವ ಜಗಲಿಯ ಮೇಲೆ ಜನಗಳ ಜೊತೆ ಕಾಡುಹರಟೆ ಹರಟುತ್ತಾ ಕುಳಿತಿರುವ ಮುದುಕಪ್ಪನನ್ನು ಸ್ತ್ರೀಯರು ಕರೆಯುತ್ತಾರೆ. ಕಾರಣ ಕುಂಬಳಕಾಯಿಯನ್ನು ಗಂಡಸರು ಒಡೆಯಬೇಕೇ ವಿನ ಹೆಂಗಸರಲ್ಲ ಎಂಬ ನಂಬಿಕೆ ಇದೆ. ಈ ಮುದುಕಪ್ಪ ಕುಂಬಳಕಾಯಿ ಒಡೆದ ನಂತರ ಪುನಃ ಹೊರಗೆ ಬಂದು ಯಥಾಪ್ರಕಾರ ತನ್ನ ಸೋಮಾರಿ ಸ್ನೇಹಿತರೊಂದಿಗೆ ಕಾಡುಹರಟೆ ಮುಂದುವರಿಸುತ್ತಾನೆ. ಆತನಿಗೆ ಎರಡೇ ಕೆಲಸ, ಕುಂಬಳಕಾಯಿ ಒಡೆಯುವುದು ಮತ್ತು ಕಾಡು ಹರಟೆ ಹೊಡೆಯುವುದು. ಈ ಕುಂಬಳಕಾಯಿಯಿಂದ ಮುದುಕಪ್ಪನಿಗೆ ಲೌಕಿಕ ಸುಖವೂ ಇಲ್ಲ, ಅಲೌಕಿಕ ಆನಂದವೂ

ಇಲ್ಲ. ಆದ್ದರಿಂದ ಶ್ರೀರಾಮಕೃಷ್ಣರು ಹೇಳುತ್ತಾರೆ, "ಇಂತಹ ಕುಂಬಳ ಕಾಯಿ ಮುದುಕಪ್ಪನ ಗುಂಪಿಗೆ ಯುವಜನರು ಸೇರಬಾರದು. ಕರ್ತವ್ಯಭ್ರಷ್ಟರಾಗಿ ಜೀವನ ವ್ಯರ್ಥಮಾಡಿಕೊಳ್ಳದೆ ಚೆನ್ನಾಗಿ ದುಡಿದು ಸಂಪಾದನೆ ಮಾಡುವುದರ ಜೊತೆಗೆ, ದಾನಧರ್ಮಾದಿ ಗಳನ್ನೂ ಮಾಡುತ್ತಾ ಭಗವಂತನಲ್ಲಿ ಅಚಲ ಶ್ರದ್ಧಾಭಕ್ತಿಗಳನ್ನು ಬೆಳೆಸಿಕೊಳ್ಳಬೇಕು."

"ಪ್ರತಿಯೊಬ್ಬ ಸಂನ್ಯಾಸಿ ಮತ್ತು ದೇವಭಕ್ತನೂ ಸ್ತ್ರೀಕುಲವನ್ನೇ, ಅವರು ಪತಿವ್ರತೆಯರಾಗಲೀ, ಅಲ್ಲದೆ ಇರಲಿ, ಎಲ್ಲರನ್ನೂ ಜಗನ್ಮಾತೆಯ ಅವತಾರಗಳೆಂದು ಭಾವಿಸಬೇಕು."

"ನಿರ್ಜನ ಪ್ರದೇಶದಲ್ಲಿ ಪ್ರಾಯದ ಹೆಂಗಸರನ್ನು ಸಂಧಿಸಿ ದಾಗಲೂ ಯಾವನು ಆಕೆಯನ್ನು ತಾಯಿಯೆಂದು ತಿಳಿದು ಮನಸ್ಸಿನಲ್ಲಿಯೇ ನಮಸ್ಕರಿಸಿ ಅವಳನ್ನು ನೋಡದೆ ಇರುವನೋ, ಅವನಲ್ಲಿಯೇ ನಿಜವಾದ ವೈರಾಗ್ಯಭಾವವಿರುವುದು. ಕೇವಲ ತೋರಿಕೆಗಾಗಿ ಯಾರು ಜನರೆದುರಿನಲ್ಲಿ ಹಾಗೆ ಮಾಡುವರೋ ಅವರನ್ನು ನಿಜವಾದ ತ್ಯಾಗಿಗಳೆಂದು ಹೇಳಲಾಗುವುದಿಲ್ಲ."

"ನಿಜವಾದ ಸಂನ್ಯಾಸಿಯ (ಪ್ರಪಂಚವನ್ನು ತ್ಯಜಿಸಿದವನು) ಅಥವಾ ತ್ಯಾಗಿಯ (ಅನಾಸಕ್ತನಾಗಿರುವವನು) ಗುರುತು ಏನು? ಇಬ್ಬರಿಗೂ ಕಾಮಕಾಂಚನಗಳ ಸಂಬಂಧವಿರಕೂಡದು. ಇಬ್ಬರಲ್ಲಿ ಯಾರಾದರೂ ಕಾಂಚನಕ್ಕೆ ಆಸಕ್ತರಾದರೂ ಅಥವಾ ಸ್ವಪ್ನದಲ್ಲಿ ಯಾದರೂ ಕಾಮಪಾಶಕ್ಕೆ ಬಿದ್ದರೂ, ಅವರ ಸಾಧನೆಯೆಲ್ಲ ನಿಷ್ಫಲವಾದಂತೆ."

ಮೇಲಿನ ಬೋಧನೆಗಳು ತ್ಯಾಗಜೀವನಕ್ಕೆ ಸಿದ್ಧರಾಗಿದ್ದ ಯುವಕರಿಗೆ ಶ್ರೀರಾಮಕೃಷ್ಣರು ನೀಡಿದ ಕೆಲವು ಉಪದೇಶಗಳು.

ಶ್ರೀರಾಮಕೃಷ್ಣರು ವಿಚಾರವಿಲ್ಲದೆ ವ್ಯವಹಾರವನ್ನು ಒಪ್ಪು ತ್ತಿರಲಿಲ್ಲ. ಅವರ ಪ್ರಕಾರ ಶಾಸ್ತ್ರವೇ ಆಗಲಿ, ಗುರುವೇ ಆಗಲಿ ಏನನ್ನು ತಿಳಿಸಿದರೂ ಅದನ್ನು ವಿಚಾರ ಮಾಡದೆ ಸ್ವೀಕರಿಸ ಬಾರದು. ಇತರರಿಂದ ಕೇಳಿದ್ದನ್ನು ಚೆನ್ನಾಗಿ ವಿಮರ್ಶೆ ಮಾಡುವ ಹಕ್ಕು ಪ್ರತಿಯೊಬ್ಬ ಮಾನವನಿಗೂ ಇದೆ. ಶ್ರೀಕೃಷ್ಣ ಗೀತೆಯಲ್ಲಿ ಅರ್ಜುನನಿಗೆ ಹೇಳುತ್ತಾನೆ, "ಅತ್ಯಂತ ರಹಸ್ಯವಾದ ಜ್ಞಾನವನ್ನು ನಾನು ನಿನಗೆ ತಿಳಿಸಿದ್ದೇನೆ. ಅದನ್ನು ಚೆನ್ನಾಗಿ ವಿಮರ್ಶೆಮಾಡಿ ನಿನಗೆ ತೋರಿದಂತೆ ಮಾಡು" ಎಂದು. ಇಂತಹ ವಿವೇಕಯುಕ್ತ ವಾದ ಜೀವನದಿಂದಲೇ ನಿಜವಾದ ಆನಂದವನ್ನು ಪಡೆಯಲು ಸಾಧ್ಯ.

### ಗೃಹಸ್ಥರಿಗೆ ಶ್ರೀರಾಮಕೃಷ್ಣರ ಬುದ್ಧಿವಾದ

ಒಂದು ದಿನ ಒಬ್ಬರು, ಗೃಹಸ್ಥರು ದೈವಭಕ್ತರಾಗುವುದಕ್ಕೆ ಸಾಧ್ಯವೆ? ಎಂದು ಕೇಳಿದರು. ಶ್ರೀರಾಮಕೃಷ್ಣರು ಮಂದಹಾಸದಿಂದ ಹೀಗೆ ಹೇಳಿದರು: "ನಾನು ನನ್ನ ಹಳ್ಳಿಯಲ್ಲಿ ಸ್ತ್ರೀಯರು ಅವಲಕ್ಕಿ ಕುಟ್ಟುತ್ತಿರುವುದನ್ನು ನೋಡಿರುವೆ. ಒಂದು ಕೈಯಿಂದ ಒರಳಿ ನಲ್ಲಿರುವ ಅವಲಕ್ಕಿಯನ್ನು ಆಡಿಸುವರು. ಮತ್ತೊಂದು ಕೈಯಿಂದ ಮಗುವನ್ನು ಹಿಡಿದುಕೊಂಡು ಅದಕ್ಕೆ ಎದೆಹಾಲನ್ನು ಕುಡಿಸು ವರು. ಅದೇ ಸಮಯಕ್ಕೆ ಬಂದವರ ಹತ್ತಿರ ನಿನ್ನ ಹಿಂದಿನ ಬಾಕಿ ಇಷ್ಟು, ಇವತ್ತಿನ ಬಾಕಿ ಇಷ್ಟು ಎಂದು ವ್ಯಾಪಾರ ಮಾಡು ವರು. ಅವರು ಮಾಡುವ ಕೆಲಸ ಅಷ್ಟೊಂದಿದ್ದರೂ ಕುಟ್ಟುವ ಯಂತ್ರ ತಮ್ಮ ಕೈಮೇಲೆ ಬಿದ್ದು ಗಾಯ ಮಾಡದೆ ಇರಲಿ ಎಂದು ಯಾವಾಗಲೂ ತಮ್ಮ ಮನಸ್ಸನ್ನು ಅದರ ಮೇಲೆ ಇಟ್ಟಿರುವರು. ಇದೇ ರೀತಿ ನೀವು ಪ್ರಪಂಚದಲ್ಲಿರಿ. ಆದರೆ ಯಾವಾಗಲೂ ನಿಮ್ಮ ಮನಸ್ಸು ದೇವರನ್ನು ಸ್ಮರಿಸುತ್ತಿರಲಿ."

"ಒಮ್ಮೆ ಪಾರ್ವತಿ ಮಹಾದೇವನನ್ನು ಕುರಿತು, 'ಹೇ ಪ್ರಭೂ! ಭಗವಂತನ ಜ್ಞಾನಕ್ಕೆ ದಾರಿ ಯಾವುದು?' ಎಂದು ಕೇಳಿದಳು. ಮಹಾದೇವನು, 'ಶ್ರದ್ಧೆಯೊಂದೇ ಹಾದಿ' ಎಂದನು. ನಿನ್ನ ಗುರುವಿನಲ್ಲಿ ಅಚಲವಾದ, ಸಂಪೂರ್ಣವಾದ ಶ್ರದ್ಧೆಯಿಲ್ಲದೆ ನೀನು ದೇವರನ್ನು ತಿಳಿಯಲಾರೆ. ಮನುಷ್ಯನಾಗಿ ಹುಟ್ಟಿ ಭಗ ವಂತನ ದರ್ಶನ ಪಡೆಯಲಿಲ್ಲ ಎಂದರೆ ಬದುಕಿನ ಪೂರ್ಣ ಸಾರ್ಥಕ್ಯ ಸಿಗುವುದಿಲ್ಲ."

"ದೇವರ ಪವಿತ್ರನಾಮದಲ್ಲಿ, ಅದರ ಶಕ್ತಿಯಲ್ಲಿ ನಂಬಿಕೆ ಇಟ್ಟು ಅದನ್ನು ಪದೇ ಪದೇ ಉಚ್ಚರಿಸುತ್ತಿದ್ದರೆ, ಭಕ್ತಿ, ವಿವೇಕ, ಜ್ಞಾನ, ವೈರಾಗ್ಯಗಳು ತಾನಾಗಿಯೇ ಬಂದು ಸೇರಿಕೊಳ್ಳುತ್ತವೆ. ಸಂಶಯಗಳೆಲ್ಲಾ ಮಾಯವಾಗಿ ಆ ನಾಮದ ಬಲದಿಂದಲೇ ಭಕ್ತನು ದೇವರನ್ನು ಹೊಂದುತ್ತಾನೆ. ಶಿಶು ಸಹಜವಾದ ಸರಳತೆ ಮತ್ತು ಅಚಲಶ್ರದ್ಧೆಗಳಿಂದ ಭಗವಂತನನ್ನು ಪಡೆಯಬಹುದು." ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ, "ಮನುಷ್ಯ ಸರಳನಾಗದೆ ಇದ್ದರೆ ಭಗವಂತನ ದರ್ಶನ ಸಾಧ್ಯವಿಲ್ಲ. ಆದರೆ ಜನ್ಮಜನ್ಮಾಂತರಗಳ ಸಾಧನೆಯಿಂದ ಮನುಷ್ಯ ಸರಳನಾಗುತ್ತಾನೆ, ಪವಿತ್ರನಾಗುತ್ತಾನೆ ಹಾಗೂ ಭಗವಂತನ ಧ್ಯಾನದಿಂದ ಪಾವನನಾಗಿ ಪುನೀತನಾಗುತ್ತಾನೆ."

"ಒಬ್ಬೊಬ್ಬರೂ ತಪ್ಪದೆ ಕರ್ಮ ಮಾಡುತ್ತಲೇ ಇದ್ದಾರೆ... ಕರ್ಮವನ್ನು ತ್ಯಾಗ ಮಾಡುವ ಹಾಗೆಯೇ ಇಲ್ಲ. ಆದ್ದರಿಂದ ಕರ್ಮ ಮಾಡು. ಅದರ ಫಲವನ್ನು ಭಗವಂತನಿಗೆ ಸಮರ್ಪಿಸಿ ಬಿಡು.... ಧನಾರ್ಜನೆ ಮಾಡು, ಆದರೆ ಒಳ್ಳೆಯ ರೀತಿಯಿಂದ. ಜೀವನದ ಉದ್ದೇಶ ಧನಾರ್ಜನೆಯಲ್ಲ, ಭಗವಂತನ ಸೇವೆ. ಧನಾರ್ಜನೆಯಿಂದ ಭಗವಂತನ ಸೇವೆ ನಡೆಯುವುದಾದರೆ, ಅದು ದೋಷವಾದುದೇನೂ ಅಲ್ಲ."

ಇವುಗಳು ಶ್ರೀರಾಮಕೃಷ್ಣರು ಗೃಹಸ್ಥರಿಗೆ ಮಾಡಿದ ಕೆಲವು ಉಪದೇಶಗಳು. ಇಂತಹ ಅಮೃತವಾಣಿಗಳನ್ನು ಹೊಂದಿರುವ 'ಶ್ರೀರಾಮಕೃಷ್ಣ ವಚನವೇದ' ನಿಜಕ್ಕೂ ಕಲಿಯುಗದ ವೇದವೇ ಸರಿ ('ಶ್ರೀರಾಮಕೃಷ್ಣ ವಚನವೇದ' ದ ಎರಡು ಸಂಪುಟಗಳ ಬೆಲೆ ರೂ.೨೦೦/-. ಇದನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಪಡೆದುಕೊಳ್ಳಬಹುದು).